ಸೈಬರ್ ವಂಚನೆ ಅರಿವು ಇರಲಿ

ಘಟಪ್ರಭಾ: ಹೊಸ ಹೊಸ ತಂತ್ರಜ್ಞಾನದಿಂದ ದೇಶ ಅಭಿವೃದ್ಧಿ ಕಡೆಗೆ ಹೋಗುತ್ತಿದ್ದೆ ಹಾಗೆ ಸೈಬರ ವಂಚಕರು ಸಹ ತಮ್ಮ ಹೊಸ ಹೊಸ ತಂತ್ರದಿಂದ ವಂಚನೆ ಮಾಡುತ್ತಿದ್ದಾರೆ. ಸೈಬರ ವಂಚನೆಗೆ ಅನಕ್ಷರಸ್ಥರ ಮಾತ್ರವಲ್ಲ ಅಕ್ಷರಸ್ಥರು ಒಳಗಾಗುತ್ತಿದ್ದಾರೆ ಎಂದು ಸೈಬರ ವಂಚನೆಯ ಸುರಕ್ಷತೆಯ ವಾರಿಯರ್ ಆಗಿರುವ ಸೀಮಾ ಕಟ್ಟಿಮನಿ ಹೇಳಿದರು.

ಡಾ.ಗಂಗಾಧರ ಆಂಗ್ಲ ಮಾಧ್ಯಮ ವಸತಿ ಶಾಲೆಯಲ್ಲಿ ಪುಣೆಯ ಕ್ವಿಕ್ ಹೀಲ್ ಫೌಂಡೇಶನ್ ಹಾಗೂ ನಿಡಸೋಸಿಯ ಎಸ್.ಜಿ.ಪಿ.ಎನ್ ಬಿಸಿಎ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ನಡೆದ ಸೈಬರ ವಂಚನೆಯ ಸುರಕ್ಷತೆಯ ಕಾರ್ಯಾಗಾರದಲ್ಲಿ ಮಾತನಾಡಿದರು.

ಇಂದು ಪೊಲೀಸ್ ಇಲಾಖೆ, ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರ ಸೈಬರ ವಂಚನೆಯ ಕುರಿತು ಜನರಲ್ಲಿ ಜಾಗ್ರತೆಯ ಅರಿವು ಮೂಡಿಸುತ್ತಿದೆ. ಆದರೂ ಜನರು ವಂಚನೆಗೆ ಒಳಗಾಗುತ್ತಿದ್ದಾರೆ. ದೇಶ-ವಿದೇಶಗಳಲ್ಲಿ ದೊಡ್ಡ ಮಟ್ಟದಲ್ಲಿ ಸೈಬರ ವಂಚಕರು ವಂಚನೆ ಮಾಡುತ್ತಿದ್ದಾರೆ. ನಾವು ಕಷ್ಟ ಪಟ್ಟು ಗಳಿಸಿದ ಹಣವನ್ನು ಕ್ಷಣಾರ್ಧದಲ್ಲಿ ವಂಚಿಸುತ್ತಿದ್ದಾರೆ. ಈ ವಂಚನೆಯ ಬಗ್ಗೆ ಮೊದಲು ನಾವು ಸುರಕ್ಷಿತರಾಗಿರಬೇಕು. ಓಟಿಪಿ, ಹುಸಿ ಲಿಂಕ್‌ಗಳ ಬಗ್ಗೆ ಎಚ್ಚರವಿರಬೇಕು. ವಿದ್ಯಾರ್ಥಿಗಳು ಅಂತರ್ಜಾಲ ಆಟಗಳ ಗೀಳಿನಿಂದ ದೂರವಿರಬೇಕು ಎಂದು ಹೇಳಿದರು. ಪ್ರಾಚಾರ್ಯ ಮೇಘರಾಜ ಸಂಪಗಾಂವ, ಆರತಿ ಶಮನೇವಾಡಿ, ಅಜಿತ ಹೆಗಡೆ, ಸಾಗರ ವಾಳಕಿ, ಮಾರುತಿ ಪಾಟೀಲ, ಶಶಿಧರ ಕರಾಡೆ, ಪೂರ್ಣಿಮ ಮೆಳವಂಕಿ, ಪ್ರಭಾವತಿ ಪತ್ತಾರ, ಗಾಯತ್ರಿ ಜಗಜಂಪಿ, ಪ್ರಾಚಾರ್ಯ ಬಸವರಾಜ ಹಾಲಬಾಂವಿ, ಪವನ ಹಿರೇಮಠ, ಆನಂದ ಸೋನಾರ ಹಾಜರಿದ್ದರು.